Government of Karnataka
Deposition Sheet Form No. R.P. 57

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಲಿಂಗಸಗೂರ

ಸಿ/ ಸಿ ನಂಬರಃ 294/2020

ಸಿ ಡಬ್ಲ್ಯೂ- 02
ಪಿ ಡಬ್ಲ್ಯೂ- 01

| | | |
|---|---|---|
| ಸಾಕ್ಷಿದಾರರ ಹೆಸರು | ಃ- | ಬಸವರಾಜ |
| ತಂದೆಯ ಹೆಸರು | ಃ- | ಭೀಮಣ್ಣ |
| ವಯಸ್ಸು | ಃ- | 39 ವರ್ಷ |
| ಉದ್ಯೋಗ | ಃ- | ವ್ಯಾಪಾರ |
| ವಾಸಸ್ಥಳ | ಃ- | ಲಿಂಗಸುಗೂರು |

**ದಿ.25-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.**

***ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ.***

ಚಾ.ಸಾ-3 ರವರ ಪರಿಚಯ ಇದೆ. ಆರೋಪಿತರ ಪರಿಚಯ ಇಲ್ಲ. ಸುಮಾರು 6 ವರ್ಷ ಹಿಂದೆ ನಾನು ಲಿಂಗಸುಗೂರು ಪೋಲಿಸ್ ಠಾಣೆಗೆ ಹೋದಾಗ ಪೋಲಿಸರು ಎರಡು ದಾಖಲೆಗಳಿಗೆ ನನ್ನ ಸಹಿಗಳನ್ನು ಪಡೆದಿರುತ್ತಾರೆ. ಸಾಕ್ಷಿ ಸ್ಥಳ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿ ವಾಹನ ಜಪ್ತಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-2(ಎ) ಎಂದು ಗುರುತಿಸಲಾಯಿತು. ನಿ.ಪಿ-1 ಮತ್ತು 2 ರಲ್ಲಿ ಏನು ಬರೆದಿರುತ್ತಾರೆ ನನಗೆ ಗೊತ್ತಿಲ್ಲ. ಪೋಲೀಸರು ನಮ್ಮ ಸಮಕ್ಷಮದಲ್ಲಿ ಪಂಚನಾಮೆ ಮಾಡಿರುವದಿಲ್ಲ ಹಾಗೂ ನಮ್ಮನ್ನು ಯಾವುದೇ ಸ್ಥಳಕ್ಕೆ ಕರೆದುಕೊಂಡು ಹೋಗಿಲ್ಲ ಹಾಗೂ ಯಾವುದೇ ವಸ್ತುಗಳನ್ನು ಮತ್ತು ವಾಹನವನ್ನು ಜಪ್ತಿ ಪಡಿಸಿಕೊಂಡಿಲ್ಲ.

**(ಮಾನ್ಯ ಎಪಿಪಿ ಅವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೇಳಿರುತ್ತಾರೆ. ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಎಪಿಪಿ ಅವರಿಂದ**

ದಿನಾಂಕ 26-08-2019 ರಂದು ಪೋಲೀಸರು ನನ್ನನ್ನು ಮತ್ತು ಚಾಸಾ-3 ರವರನ್ನು ಕರೆಯಿಸಿದ ಚಾ..ಸಾ-1 ರವರು ತೋರಿಸಿದ ಮೇರೆಗೆ ಲಿಂಗಸುಗುರು ಬಸ್ ನಿಲ್ದಾಣದ ಹತ್ತಿರ ಕಸಬಾಲಿಂಗಸುಗೂರಿಗೆ ಹೋಗುವ ಡಾಂಬರ್ ರಸ್ತೆಯ ಮೇಲೆ ಪಂಚನಾಮೆ ಮಾಡಿ ಜೀಪಿನ

ಗಾಜಿನ ಚೂರುಗಳನ್ನು ಮತ್ತು ಕಲ್ಲನ್ನು ಜಪ್ತಿಪಡಿಸಿಕೊಂಡು ನಮ್ಮ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ಬೆಳಿಗ್ಗೆ 11-00 ರಿಂದ 11-45 ಗಂಟೆಯವರೆಗೆ ನಮ್ಮ ಲಿಂಗಸುಗೂರು ಪೋಲಿಸ್ ಠಾಣಾ ಆವರಣದಲ್ಲಿ ಸಮಕ್ಷಮದಲ್ಲಿ ಜೀಪ ನಂ.-36, ಜಿ-128 ಟಾಟಾಸುಮೋವನ್ನು ಪಂಚನಾಮೆ ಮೂಲಕ ವಾಹನ ಜಪ್ತಿ ಪಡಿಸಿಕೊಂಡು ನನ್ನ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ರೀತಿಯಾಗಿ ನಿ.ಪಿ-1 ಮತ್ತು 2 ರಂತೆ ನಮ್ಮ ಸಮಕ್ಷಮದಲ್ಲಿ ಪಂಚನಾಮೆ ಮಾಡಿದರೂ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಶ್ರೀ ಎಸ್.ಹೆಚ್.ಜಿ/ಎ.ಬಿ.ಡಿ/ಎಮ್.ಎಸ್.ಪಿ ವಕೀಲರಿಂದಃ**

ಇಲ್ಲ.

ಮರು ವಿಚಾರಣೆ ಃ

ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

**ಓ. ಹೇ. ಕೇ. ಸರಿ ಇದೆ**

ಸಹಿ/-

ಪ್ರದಾನ ಸಿವಿಲ. ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ಲಿಂಗಸುಗೂರು.